ಶ್ರೀ ಪಿ. ಎನ್. ಪಾಟೀಲ್.—ತಾವು ಹೀಗೆಲ್ಲಾ ಮಾಡುವುದಾದರೆ ನಮ್ಮ ವಿಷಾದವನ್ನು ವ್ಯಕ್ತಪಡಿಸಲು ವಾಕ್‌ಔಟ್ ಮಾಡಬೇಕಾಗುತ್ತದೆ.....

ಶ್ರೀ ಎಂ. ಎಸ್. ಕೃಷ್ಣನ್, ಶ್ರೀ ಕಕ್ಕಿಲಾಯ, ಶ್ರೀ ಪಿ. ಎನ್. ಪಾಟೀಲ್ ಇವರೆಲ್ಲಾ (ಸಭೆಯಿಂದ ಹೊರಗಡೆಗೆ ಹೋದರು).

[*The members withdrew*]

(i) Mysore Ownership Flats (Regulation of the promotion of Construction, Sale, Management and Transfer) Bill, 1972.

(ii) The Mysore Apartment Ownership Bill, 1972.

(iii) The Mysore Acquisition of Lands (For Grant of House Sites) Bill, 1972—Introduction.

Sri B. BASAVALINGAPPA (Minister for Municipal Administration).—I beg to introduce the following Bills:

(*a*) The Mysore Ownership Flats (Regulation of the Promotion* of Construction, Sale, Management and Transfer) Bill, 1972;

(*b*) The Mysore Apartment Ownership Bill, 1972

(*c*) The Mysore Acquisition of Lands (For Grant of House Sites) Bill, 1972.*

Madam SPEAKER.—The Bills are introduced.

Statement of the Chief Minister

re:—Constitution of One-Man Commission

ಶ್ರೀ ಸಿ. ಬೈರೇಗೌಡ.—ಸರ್ಕಾರದವರು ಆ ಸಮಿತಿಯನ್ನು ನಿರ್ಮಾಣ ಮಾಡುವುದಕ್ಕೆ ಕಾರಣ ಏನು.....

ಅಧ್ಯಕ್ಷರು.—ನೀವೂ ಕೂಡ ಈಗ ವಾಕ್‌ಔಟ್ ಮಾಡಬೇಕೆಂದು ನಿಂತಿದ್ದೀರಾ ?

ಶ್ರೀ ಸಿ. ಬೈರೇಗೌಡ.—ಈ ವಿಚಾರದಲ್ಲಿ ನನ್ನ ತೀವ್ರ ವಿರೋಧವಿದೆ.

(ಸಭೆಯಿಂದ ಮಾನ್ಯ ಸದಸ್ಯರಾದ ಬೈರೇಗೌಡರೂ ಹೊರಗಡೆಗೆ ಹೋದರು)

ಶ್ರೀ ಡಿ ದೇವರಾಜ ಅರಸ್.—ಈಗತಾನೆ ಸದನದಲ್ಲಿ ಇದ್ದ ಮಾನ್ಯ ಸದಸ್ಯರುಗಳು ಏನು ವಾಕ್‌ಔಟನ್ನು ಮಾಡಿದರು ಅದು ಸಭಾಘನತೆಗೆ ಯಾವ ರೀತಿಯಿಂದಲೂ ಸರಿಯಾದುದಲ್ಲ. ಅವರು ಸಭೆಗೆ ಅಗೌರವ ತರತಕ್ಕ ರೀತಿಯಲ್ಲಿ ನಡೆದುಕೊಂಡಿದ್ದಾರೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರೂ ಮತ್ತು ಇತರರೂ ರಾಜ್ಯದಲ್ಲಿ ಅಭಾವ ಪರಿಸ್ಥಿತಿ ಏನು ಉಂಟಾಗಿದೆ ಅದರ ಪರಿಶೀಲನೆಗಾಗಿ ಒಂದು ಸಮಿತಿಯನ್ನು ನೇಮಿಸಬೇಕು ಎಂದು ಹೇಳಿದನಂತರ ಸರ್ಕಾರದವರೂ ಕೂಡ ವಿಷಯವನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡುವುದರ ಬಗ್ಗೆ ಸರ್ಕಾರದ ಅಭ್ಯಂತರವೇನೂ ಇರುವುದಿಲ್ಲ ಎಂದು ಹೇಳಿದ ನಂತರ ಅದರ ಬಗ್ಗೆ ಪೊಲೀಸ್ ಒಂದು ಸಮಿತಿಯನ್ನು ಮಾಡಿದ್ದಾಯಿತು. ಅದನ್ನು ಸರಿಯಾಗಿಲ್ಲ ಎಂದು ಹೇಳಿದ್ದರಿಂದ ಇನ್ನೊಂದು ಸಮಿತಿಯನ್ನು ನೇಮಕ ಮಾಡಿದ್ದಾಯಿತು. ಅದೂ ಸರಿಯಾಗಿಲ್ಲವೆಂದು ಹೇಳಿದ್ದಕ್ಕೆ ಸಭೆಯಲ್ಲೇ ನನ್ನೆಯ ದಿವಸ ಒಂದು ತೀರ್ಮಾನ

*The Three Bills introduced are reproduced as Annexure to the day's proceedings.

(ಶ್ರೀ ಡಿ. ದೇವರಾಜ ಅರಸ್)

ವನ್ನು ಸದಸ್ಯರುಗಳೆಲ್ಲಾ ಸೇರಿ ತೆಗೆದುಕೊಂಡಿದ್ದಾಯಿತು. ಅದರ ಪ್ರಕಾರ ಒನ್ಯ ಮ್ಯಾನ್ ಕಮಿಷನ್ನನ್ನು ನೇಮಕ ಮಾಡಿದ್ದಾಯಿತು. ನೆನ್ನೆಯ ತೀರ್ಮಾನವನ್ನು ವಿರೋಧಪಕ್ಷದವರು ಹೇಳಿದಂತೆಯೇ ಸರ್ಕಾರ ಒಪ್ಪಿ ನೇಮಕ ಮಾಡಿದ್ದಾಗಿದೆ. ಆ ಕಮಿಟಿಯನ್ನು ನೇಮಕ ಮಾಡತಕ್ಕ ಬಗ್ಗೆ ಸರ್ಕಾರ ಯಾರನ್ನೂ ಒತ್ತಾಯ ಮಾಡಲಿಲ್ಲ ಹಿಂಸೆಮಾಡಲಿಲ್ಲ, ವಿರೋಧ ಪಕ್ಷದವರ ಚರ್ಚೆಯ ಪ್ರಕಾರ ಸರ್ಕಾರ ಒಪ್ಪಿದೆ. ಹಾಗೆ ಸಭೆಯಲ್ಲಿ ಏನಾದರೂ ಒಂದು ವಿಷಯ ತೀರ್ಮಾನವಾಗತಕ್ಕ ಸಮಯದಲ್ಲಿ—ಅಂದರೆ ಈಗ ಸಭೆ ಏನೋ ಒಂದು ತೀರ್ಮಾನ ತೆಗೆದುಕೊಳ್ಳುತ್ತದೆ, ಈಗ ಸಭೆಯಲ್ಲಿ ಕೆಲವರಿಲ್ಲ. ಆದರೆ ಅವರು ಸಾಯಂಕಾಲ ಬಂದು ಈ ಸಭೆ ನಮ್ಮ ಗೈರುಹಾಜರಿಯಲ್ಲಿ ಒಂದು ತೀರ್ಮಾನ ತೆಗೆದುಕೊಂಡಿದೆ, ಅದಕ್ಕೆ ನಾವು ಜವಾಬ್ದಾರರಲ್ಲ ಅದನ್ನು ಮತ್ತೆ ಚರ್ಚೆಗೆ ಇಡಬೇಕೆಂದರೆ ಅದು ಸಾಧ್ಯವೇ? ಇದರಲ್ಲಿ ಏನು ತತ್ವ ಅಡಗಿದೆಯೋ ನನಗೆ ಅದು ತಿಳಿಯದಾಗಿದೆ. ಆದರೆ ಎಲ್ಲಕ್ಕಿಂತಲೂ ತತ್ವಪರಿಪಾಲನೆಯಲ್ಲಿ ಶ್ರೀ ಬ್ಯಾರೇಗೌಡರು, ಶ್ರೀ ಕಕ್ಕಿಲಾಯ, ಶ್ರೀ ಎಂ. ಎಸ್. ಕೃಷ್ಣನ್ ಮತ್ತು ಶ್ರೀ ವಿ. ಎನ್. ಪಾಟೀಲ್ ಇವರೇ ಹೆಸರಾದವರೋ? ಇವರು ಇದು ತತ್ವದ ಪ್ರಕಾರ ನಡೆದಿಲ್ಲ ಎಂದರೆ ಇವರ ಆ ತತ್ವ ಯಾವುದು? ಇವರಿಗೆ ಆ ಬಡವರ ಬಗ್ಗೆ, ಹೊಟ್ಟೆಗಿಲ್ಲದವರ ಬಗ್ಗೆ ಹಸಿವಿನಿಂದ ನರಳತಕ್ಕವರ ಬಗ್ಗೆ ಇರತಕ್ಕ ಆ ಅನುಕಂಪ ಈ ಸಭೆಯಲ್ಲಿರತಕ್ಕ 217 ಜನರ ಪೈಕಿ ಇವರನ್ನು ಬಿಟ್ಟರೆ ಬೇರೆ ಇನ್ನಾರಿಗೂ ಅವರ ಬಗ್ಗೆ ಅನುಕಂಪವಿಲ್ಲವೋ? ಇವರ ವರ್ತನೆಯನ್ನು ನೋಡಿದರೆ ಅದನ್ನು ಈ ಸಭೆಯವರು ಒಪ್ಪುವುದಕ್ಕೂ ಆಗುವುದಿಲ್ಲ ಮತ್ತು ದೇಶದ ಜನರು ಇವರ ವರ್ತನೆಯನ್ನು ನೋಡಿ ನಗುತ್ತಾರೆ. ವಿರೋಧಪಕ್ಷದಲ್ಲಿರತಕ್ಕವರು ಸಭೆಯಲ್ಲಿ ಯಾವ ರೀತಿ ವರ್ತಿಸಬೇಕು, ಯಾವರೀತಿ ನಡೆದುಕೊಳ್ಳಬೇಕು ಎಂಬುದು ಅವರಿಗೇ ಗೊತ್ತಿಲ್ಲದಿದ್ದರೆ ಅದಕ್ಕೆ ನಾನೇನು ಮಾಡಲಿ?

2—30 P.M.

ಈ ಸಭೆಯು ಪರವಾಗಿ ಒಬ್ಬ ಸದಸ್ಯರನ್ನು ಕಳುಹಿಸೋಣವೆಂದು ಒಪ್ಪಿಕೊಂಡಿರಿ. ಮಾನ್ಯ ಶ್ರೀ ಆರ್ಮುಗಂ ಅವರು ನಮ್ಮ ಪಕ್ಷದವರೇನೂ ಅಲ್ಲ. ಅವರು ಪಕ್ಷಪಾತ ತೋರಿಸುತ್ತಾರೆಂದು ನಾವು ಯಾರೂ ಭಾವಿಸಬೇಕಾಗಿಲ್ಲ. ಅವರು ಬೇರೆ ಪಕ್ಷದವರು. ಆದಮೇಲೆ ಈಗ ಕೆಲವು ಸದಸ್ಯರು ಆ ಒಂದು ವಿಷಯದಲ್ಲಿ ಪುನಃ ಚರ್ಚೆಯನ್ನು ಮಾಡುತ್ತಿರುವುದನ್ನು ನೋಡಿದರೆ, ಅವರು ಇದರಲ್ಲಿ ಏನೋ ರಾಜಕೀಯ ಮಾಡುವುದಕ್ಕೆ ಹೊರಟಿರುವುದು ಅಕ್ಷಮ್ಯ ಅಪರಾಧ. ಈ ದೇಶಕ್ಕೆ ಈಗ ಬಂದಿರತಕ್ಕ ಕಷ್ಟಪರಿಸ್ಥಿತಿ ಸ್ವತಂತ್ರವಾದುದಲ್ಲ, ದೈವನಿರ್ಮಿತವಾದುದೆಂದು ನಾನು ಒತ್ತಿಒತ್ತಿ ಹೇಳುತ್ತೇನೆ. ಆದ್ದರಿಂದ ಸರ್ಕಾರ ಇಂತಿಂಥ ಕೆಲಸಗಳನ್ನು ಮಾಡಬೇಕಾಗಿದೆ, ಅದನ್ನು ಮಾಡಿಲ್ಲವೆಂದು ಹೇಳಬೇಕು. ಅದನ್ನು ಮಾಹೋಣ. ಅಂತಹ ಸಲಹೆಗಳೇನಾದರೂ ಕೊಟ್ಟರೆ ಸ್ವೀಕರಿಸೋಣ. ಇಂತಹ ಸಂದರ್ಭದಲ್ಲಿ ಯಾರಾದರೂ ಸಲಹೆ ಕೊಟ್ಟರೆ ಅದನ್ನು ಕೇಳಬಾರದೆಂದೇನೂ ಇಲ್ಲ. ವಿರೋಧಪಕ್ಷದವರಲ್ಲಿ ಯಾರು ಏನು ಸಲಹೆ ಕೊಟ್ಟರೂ ಅದನ್ನು ಪರಿಶೀಲಿಸಲಾಗುತ್ತದೆ. ಆದರಲ್ಲಿ ಏನಾದರೂ ಅನುಮಾನವಿದ್ದರೆ ಹೇಳಲಿ, ತಿದ್ದಿಕೊಳ್ಳಲಾಗುತ್ತದೆ. ನಮಗೆ ಗೊತ್ತಾಗದೆ ವಿರೋಧಪಕ್ಷದವರು ಏನೂ ಗೊತ್ತಿಲ್ಲವೆಂದು ಹೇಳುವುದಿಲ್ಲ. ಅಂತಹ ವಿಚಾರಗಳನ್ನು ಯಾರೂ ಈ ಮನೆಯೊಳಗೂ ಹೇಳಲಿಲ್ಲ, ಹೊರಗೂ ಹೇಳಲಿಲ್ಲ. ಒಂದುವೇಳೆ ವಿಶೇಷ ವಾದಂಥ ವಿಚಾರಗಳೇನಾದರೂ ಇದ್ದಲ್ಲಿ ಅವನ್ನು ನಮಗೆ ತಿಳಿಸಿದರೆ, ಅವನ್ನು ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಇದರಲ್ಲಿ ನಾವೆಲ್ಲರೂ ಸೇರಿಕೊಂಡು ಯಾವ ಒಂದು ರಾಜಕೀಯ ಪಕ್ಷದ ಅಭಿಪ್ರಾಯವನ್ನು ಇಟ್ಟುಕೊಳ್ಳದೆ ಕೆಲಸ ಮಾಡಬೇಕಾಗಿದೆ. ನಾವೆಲ್ಲರೂ ಒಟ್ಟುಗೂಡಿಕೊಂಡು ಇಂತಹ ಸಮಸ್ಯೆಗಳನ್ನು ಎದುರಿಸುವ ಕಾಲದಲ್ಲಿ ಕೆಲವು ಸ್ವೇಹಿತರು ಈ ವಿಚಾರವನ್ನು ಈ ರೀತಿ ಬೆಳೆಸುತ್ತೇವೆಂದು ತಿಳಿದುಕೊಂಡಿದ್ದರೆ ಖಂಡಿತವಾಗಿಯೂ ಅವರು ಏನೊಂದು ಆಶೆಯನ್ನು ಇಟ್ಟುಕೊಂಡಿದ್ದಾರೋ ಅದಕ್ಕೆ ಧಕ್ಕೆ ಬರುತ್ತದೆ. ಅವರು ಜನಗಳ ಕಷ್ಟಸುಖಗಳನ್ನು ನೋಡುವ ದೃಷ್ಟಿಯಿಂದ ಮಾತನಾಡಿಲ್ಲವೆಂಬುದು ಸ್ಪಷ್ಟವಾಗಿ ತೋರುತ್ತದೆ. ಕೇವಲ ತಮ್ಮ ಒಂದು ರಾಜಕೀಯ ಪಕ್ಷವನ್ನು ಬೆಳೆಸುವ ದೃಷ್ಟಿಯಿಂದ ಹಾಗೂ ತಮ್ಮ ಬೆಂಬಲಿಗರಿಗೆ ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಆ ರೀತಿ ಮಾತನಾಡುತ್ತಿದ್ದಾರೆಂದು ನನಗೆ ತೋರುತ್ತದೆ. ಇದಕ್ಕೆ ಕನ್ನಡದಲ್ಲಿ ಒಂದು ಗಾದೆ ಇದೆ. ಅದನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿ ಬಂತು. ಗಡ್ಡ ಹತ್ತಿಕೊಂಡು ಉರಿಯುತ್ತಿರುವಾಗ, ಬೀಡಿ ಹಚ್ಚಿಕೊಳ್ಳುವುದಕ್ಕೆ ಹೋದರಂತೆ ' ಹಾಗೆ ಅಂತಹ ಒಂದು ಪರಿಸ್ಥಿತಿ ಇಲ್ಲಿ ಕಾಣುತ್ತಿದೆ. ನಾವು ಕಮ್ಯೂನಿಸ್ಟ್ ಪಕ್ಷದವರು, ನಾವು ಪ್ರತಿಪಕ್ಷದವರು,

ನಾವು ಜನಸಂಘದವರು, ಎಂದು ಹೇಳಿಕೊಳ್ಳುತ್ತಿದ್ದಾರೆ. ಅವನ್ನೆಲ್ಲಾ ನಾವು ನೋಡಿದ್ದೇವೆ. ಅವರು ಅವರವರ ಪಕ್ಷಗಳ ಪರವಾಗಿ ಏನೇನೋ ಹೇಳಿಕೊಳ್ಳುವುದಕ್ಕೋಸ್ಕರ ಮಾತನಾಡುತ್ತಿದ್ದಾರೆಂದು ನನಗೆ ಅನುಮಾನ ಬರುತ್ತಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇದರಲ್ಲಿಯೂ ನೀವು ಗೆದ್ದಿದ್ದೀರಿ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಗಳು ಯಾವುದಾದರೂ ಒಂದು ಪಾರ್ಟಿ ವಿಷಯವಾಗಿ ಮಾತನಾಡುವಾಗ ಆ ಪಾರ್ಟಿಗೆ ಸಂಬಂಧಪಟ್ಟ ಸದಸ್ಯರು ಈ ಸಭೆಯಲ್ಲಿ ಇದ್ದಾಗ್ಗೆ ಮಾತನಾಡಬೇಕಾಗಿತ್ತು. ಅವರ ಗೈರುಹಾಜರಿಯಲ್ಲಿ ಆ ರೀತಿ ಮಾತನಾಡಬಾರದು.

ಶ್ರೀ ಡಿ. ದೇವರಾಜ್ ಅರಸ್.—ಅದೇನೂ ಇಲ್ಲ. ಅವರು ಈ ಸಭೆಯಲ್ಲಿದ್ದಾಗಲೂ ಕೂಡ ನಾನು ಆ ರೀತಿ ಮಾತನಾಡುತ್ತೇನೆ. ಒಟ್ಟಿನಲ್ಲಿ ಆ ರೀತಿಯಾಗಿ ಅವರು ಮಾತನಾಡಿದ್ದು ಖಂಡನೀಯವಾದುದೆಂದು ಹೇಳುತ್ತೇನೆ. ಈ ಮಾನ್ಯ ಸಭೆಯು ನಿನ್ನೆ ಸರ್ವಾನುಮತದಿಂದ ಒಪ್ಪಿರುವ ವಿಚಾರವನ್ನು ಪುನಃ ಇವತ್ತು ಚರ್ಚೆಗೆ ತೆಗೆದುಕೊಂಡು ಪರಿಶೀಲನೆಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಯಾವ ಕಾನೂನೂ ಸಹ ಇಲ್ಲ ಅವಕಾಶವೂ ಇಲ್ಲ ಮತ್ತು ಅದಕ್ಕೆ ಈ ಸಭೆ ಒಪ್ಪತಕ್ಕದ್ದೂ ಆಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಶ್ರೀ ಕೆ. ಕೆ. ಮೂರ್ತಿಯವರ ವಿಷಯದ ಬಗ್ಗೆ ಈ ಸಭೆಯಲ್ಲಿ ಚರ್ಚೆಯಾಗಬೇಕು. ಅದಕ್ಕೆ ತಾವು ಜಾಗ್ರತೆಯಾಗಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಅದನ್ನು ಆಮೇಲೆ ತೆಗೆದುಕೊಳ್ಳೋಣ. The matter is closed now. Mr. Chandrashekhar to continue further discussion on the Bill.

Mysore Land Reforms (Amendment) Bill, 1972—Motion to Consider [Debate Continued]

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ನಿನ್ನೆ ನಾನು ಮಾತನಾಡುವಾಗ ಈ ಭೂಸುಧಾರಣೆಯ ಕಾನೂನು ಸದನದ ಮುಂದೆ ಬಂದಮೇಲೆ ಅನೇಕ ತರಹ ವೇಷಭೂಷಣಗಳು ಪ್ರಾರಂಭವಾಗಿವೆಯೆನ್ನುವುದನ್ನು ಹೇಳುತ್ತಿದ್ದೆ. ಈ ಸಭೆಯ ನಾಯಕರಾಗಿರುವವರು ಇಂತಹ ಬೆದರಿಕೆಗೆ ಅಂಜಬೇಕಾದ ಪ್ರಮೇಯವೇನೂ ಇಲ್ಲ.

ಶ್ರೀ ಎಚ್. ಡಿ. ದೇವೆಗೌಡ.—ತಾವು ಮೊದಲನಿಂದಲೂ ಅಜೆಂಡಾ ಪ್ರಕಾರ ಈ ಸಭೆಯ ಕಾರ್ಯಕಲಾಪಗಳು ನಡೆಯಬೇಕೆಂದು ಹೇಳಿದ್ದೀರಿ. ಅಜೆಂಡಾದಲ್ಲಿ ಕಾರ್ಯಕ್ರಮದ ಪಟ್ಟಿ ಏನಿದೆಯೋ ಅದರ ಪ್ರಕಾರ ಲ್ಯಾಂಡ್ ರಿಫಾರಮ್ಸ್ ಬಗ್ಗೆ ಚರ್ಚೆ ನಡೆಯಬೇಕಾಗಿದೆ. ಅದು ಮುಗಿಯುವುದಕ್ಕೆ ಇನ್ನೂ 10-12 ದಿವಸಗಳಾದರೂ ಬೇಕಾಗುತ್ತದೆ. ಈಗ ನಾವು ಕಳುಹಿಸಿರತಕ್ಕ ಅಲ್ಪ ಕಾಲಾವಧಿಯ ಚರ್ಚೆಗೆ ರೂಲ್ 15ರ ಪ್ರಕಾರ ಸುಮಾರು 2½ ಅಥವಾ ಮೂರು ಗಂಟೆಗಳಾದರೂ ಅವಕಾಶ ಬೇಕಾಗುತ್ತದೆ. ಆದ್ದರಿಂದ ತಾವು ಈ ಚರ್ಚೆಯನ್ನು ಇವತ್ತು ಜಾಗ್ರತೆಯಾಗಿ ತೆಗೆದುಕೊಳ್ಳಬೇಕು. ಈಗಾಗಲೇ 2-30 ಗಂಟೆಯಾಗಿದೆ.

ಅಧ್ಯಕ್ಷರು.—ಆ ಚರ್ಚೆಯನ್ನು ಇವತ್ತು 3½ ಗಂಟೆಗೆ ತೆಗೆದುಕೊಳ್ಳೋಣ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾಯಕರಾಗಿರುವವರು ಈ ಗೋಮುಖ ವ್ಯಾಘ್ರಗಳ ಬೆದರಿಕೆಗೆ ಏನೂ ಹೆದರಬೇಕಾಗಿಲ್ಲ. ಈ ದೇಶದ ಜನ ನಾವು ಇವತ್ತು ಏನು ನೀತಿಯನ್ನು ಹಾಕಿಕೊಂಡಿದ್ದೇವೋ ಅದಕ್ಕೆ ಬೆಂಬಲ ಕೊಟ್ಟು ಅಣುವಾಗಿ ಆಸ್ತಿಭಾರವಾಗಿ ನಿಂತುಕೊಂಡಿದ್ದಾರೆ. ನಮ್ಮ ನಿಲುವು ಯಾಪರೀತಿಯಲ್ಲಿ ಹೋಗುತ್ತಿದೆಯೆಂಬುದನ್ನು ಕಾದು ನೋಡುತ್ತಿದ್ದಾರೆ. ಅಂದಮೇಲೆ ಪ್ರಗತಿಪರವಾಗಿ ವಿಚಾರಮಾಡತಕ್ಕ ಪ್ರತಿಯೊಬ್ಬ ವಿಧಾನಸಭಾ ಸದಸ್ಯರೂ ಹಾಗೂ ಈ ದೇಶದ ಜನರೂ ಕೂಡ ಇವತ್ತು ಈ ಭೂಸುಧಾರಣೆ ಏನಿದೆಯೋ ಅದಕ್ಕೆ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ. ಅನೇಕ ಶತಮಾನಗಳಿಂದ ಯಾವನಿಗೆ ಒಂದು ಇಂಚು ನೆಲವಿಲ್ಲವೋ, ಯಾವನಿಗೆ ಏನೂ ಆಸ್ತಿ ಇಲ್ಲವೋ ಅಂತಹವನು ಆಸ್ತಿಯನ್ನು ಪಡೆಯತಕ್ಕ ಕಾಲವನ್ನು ಕಾದು ನೋಡುತ್ತಿರುತ್ತಾನೆ. ಅಂತಹವನು ನಿಜವಾಗಿ ನಾವು ಏನು ಮಾಡುತ್ತೇವೆ ಎಂಬುದನ್ನು ಯಾವಾಗಲೂ ನಿರೀಕ್ಷಣೆ ಮಾಡುತ್ತಿರುತ್ತಾನೆಂಬ ಮಾತನ್ನು ನಾವು ಸದಾಕಾಲದಲ್ಲಿಯೂ ನೆನಪಿನಲ್ಲಿಟ್ಟು